ವಿಜಯಮ್ಮ ಕೋಣೆಯ ಬಾಗಿಲು ಮುಚ್ಚಿ ಬಂದರು, 'ಏನು ಮಾಡ್ತಾ ಇದ್ದೀರಿ ನೀವು..? ಕೈಗೆ ಬಂದ ತುತ್ತು ಬಾಯಿಗೆ ಬಾರದಂತೆ ಮಾಡ್ತಿದ್ದೀರಲ್ಲ.. ಸೂರ್ಯನನ್ನು ಬಿಟ್ಟು ನಿಮ್ಮಂಗಿ ಮಗನಿಗೆ ಗಂಟು ಹಾಕಲು ನೋಡ್ತಿದ್ದೀರ.. ಏನಾಗಿದೆ ನಿಮ್ಗೆ..?'

'ನಾನು ಸರಿಯಾಗೇ ಇದ್ದೀನಿ ವಿಜಯ.. ಮಗನ ಮೇಲಿನ ಕುರುಡು ಮಮಕಾರ ನಿನಗೆ ಸ್ವಾರ್ಥಿಯನ್ನಾಗಿ ಮಾಡಿದೆ.. ನೀನೂ ಒಬ್ಬ ಹೆಣ್ಣು.. ಅರ್ಥ ಮಾಡಿಕೋ.. ಸೂರ್ಯನ ಬಗ್ಗೆ ತಿಳಿದೂ ಸಹ..'

ಪತಿಯ ಮಾತುಗಳನ್ನು ಅರ್ಧಕ್ಕೆ ತುಂಡರಿಸುತ್ತ ವಿಜಯಮ್ಮ ಕುಪಿತರಾಗಿ, 'ಸೂರ್ಯನ ಬಗ್ಗೆ ಅವ್ಳಿಗೆ ಎಲ್ಲಾ ತಿಳಿದೇದಿದೆಯಲ್ವಾ.. ಅವ್ಳೇ ಒಪ್ಪಿರುವಾಗ ನಿಮ್ದೇನು ರಾಗ? ನಾವು ಹುಡುಕಿದ್ರೂ ನಮ್ಗೆ ಅಪೂರ್ವಳಂಥ ಹುಡ್ಗೀ ಸಿಗಲ್ಲ.. ಅವ್ಳೇನು ಮಹಾ ಉಪಕಾರ ಮಾಡ್ತಾ ಇಲ್ಲ.. ಅವ್ಳಿಗೂ ನಾವು ಬೇಕಾದಷ್ಟು ಮಾಡಿದ್ದೀವಲ್ಲ.' ರಾಯರು ಪತ್ನಿಯ ಕಡೆ ತಿರಸ್ಕಾರದ ನೋಟ ಬೀರಿದರು.

'ನೀನು.. ಇಷ್ಟು ಸಣ್ಣ ಮನಸ್ಸಿನವಳು ಅಂತ ನಾನು ಭಾವಿಸಿರಲಿಲ್ಲ.. ಅಪೂರ್ವಳಿಗೆ ಸೂರ್ಯನ ಬಗ್ಗೆ ತಿಳಿದಿರುವುದು.. ಅರ್ಧ ಸತ್ಯ ಮಾತ್ರ..! ಪೂರ್ಣ ಸತ್ಯ ತಿಳಿದ ಮೇಲೂ ಸೂರ್ಯನ ಜೊತೆ ಅವ್ಳು ಬಾಳ್ತಾಳಾ..? ಈಗ್ಲೇ ನಿಜ ತಿಳಿದು ಅವ್ಳು ಸೂರ್ಯನ ಬಾಳಿನಿಂದ ಈ ಹಂತದಲ್ಲಿ ಹೊರಗೆ ಹೋಗುವುದು ಮೇಲೋ ಅಥವಾ ನಾಳೆ ಮದುವೆ ಆಮೇಲೆ ಸತ್ಯ ತಿಳಿದು ಹೋಗೋದು ಸರಿನೋ.. ನೀನೇ ಯೋಚನೆ ಮಾಡು..' ವಾಸ್ತವ ತೆರೆದಿಟ್ಟು ಅವರಿಗೆ ಮನದಟ್ಟು ಮಾಡುವ ಯತ್ನ ನಡೆಸಿದರು.

'ಸತ್ಯ ತಿಳಿದ ಮೇಲೆ ಅವ್ಳು ಬಿಟ್ಟು ಹೋಗ್ತಾಳೆ ಅಂತ ನಾವ್ಯಾಕೆ ಯೋಚಿಸಬೇಕು..? ಅಪೂರ್ವ ಸೂರ್ಯನನ್ನು ಪ್ರೀತಿಸುತ್ತಿರುವುದು ಸುಳ್ಳಾ..? ಪ್ರೀತಿಯಿದ್ದಲ್ಲಿ ಕ್ಷಮೆ ಅನ್ನೋದೂ ಇರುತ್ತೆ.. ಅಪೂರ್ವಳದ್ದು ದೊಡ್ಡ ಮನಸ್ಸು.. ಅವ್ಳು ಖಂಡಿತ ಸೂರ್ಯನ ಎಲ್ಲಾ ತಪ್ಪು ಮನ್ನಿಸಿ ಅವ್ನೊಂದಿಗೆ ಖುಷಿಯಾಗಿ ಬಾಳ್ತಾಳೆ ಅನ್ನೋ ವಿಶ್ವಾಸ ನನಗಿದೆ..' ವಿಜಯಮ್ಮ ದೃಢವಾಗಿ ನುಡಿದರು. 'ಆದರೆ ನೀವಾಗೇ ಯಾವುದೇ ಕಾರಣಕ್ಕೂ ಈ ಸತ್ಯ ಅವಳ ಮುಂದೆ ಹೇಳಬಾರದು.. ನಿಮ್ಗೆ ನನ್ನೇಲಾಣೆ..!' ಎಂದಾಗಲಂತೂ ರಾಯರ ಬಾಯಿ ಕಟ್ಟಿತು.

'ನಿನ್ನ ಮದ್ವೆ ಆದಾಗ ಸೂರ್ಯ, ನಿರಂಜನನ ಮಗ ಅನ್ನೋ ಸತ್ಯ ಅವ್ಳಿಗೆ ತಿಳಿಬಾರದೂಂತ ಆಣೆ ಹಾಕಿದ್ದೀ..ಅದ್ರಿಂದ ಎಷ್ಟು ಸಮಸ್ಯೆ ಆಯ್ತು ಅಂತ ನಿನ್ಗೇ ಗೊತ್ತು..ಈಗ ಈ ಆಣೆ ಹಾಕಿದ್ದಿ..ಇದ್ರ ಪರಿಣಾಮನೂ ನಾವೇ ಅನುಭವಿಸಬೇಕು..ಅಷ್ಟೇ..' ದುಗುಡದಿಂದ ನುಡಿದರು.

ಅಪೂರ್ವಳ ಮುಖ ಕಾಣುವಾಗಲೆಲ್ಲ ಆ ಸತ್ಯ ಮುಳ್ಳಾಗಿ ಅವಳ ಮನಸ್ಸು ಚುಚ್ಚುತ್ತಲೇ ಇತ್ತು. ಸಂಬಂಧ ಗಾಢವಾಗಿ ಬೆಸೆಯಬೇಕಾದರೆ ಅದು ವಿಶ್ವಾಸ, ನಂಬಿಕೆಯೆಂಬ ಸತ್ವದಿಂದ ಮಾತ್ರ ಸಾಧ್ಯ. ಸುಳ್ಳು, ವಂಚನೆಯ ಮೊರೆ ಹೊಕ್ಕು ಬೆಸೆಯುವ ಸಂಬಂಧಗಳು ನಿಲ್ಲುವುದೇ?

**ಅಧ್ಯಾಯ 23**

ದಿನಗಳು ಸರಿದವು. ಅಪೂರ್ವಳ ಕೊನೆಯ ಸೆಮಿಸ್ಟರ್ ಮುಗಿಯುವ ಹಂತಕ್ಕೆ ಬಂದಿತ್ತು. ಕಾಲೇಜಿನಲ್ಲಿ ನಡೆದ ಕ್ಯಾಂಪಸ್ ಸಂದರ್ಶನದಲ್ಲೂ ಅವಳು ಆಯ್ಕೆಯಾಗಿದ್ದಳು. ವಿಪ್ರೋ ಕಂಪೆನಿಯಲ್ಲಿ ಒಳ್ಳೆಯ ಮೊತ್ತದ ಸಂಬಳದ ನೌಕರಿ ದೊರೆತಾಗ, ಅವಳಿಗೆ ಹಾರಾಡಲು ರೆಕ್ಕೆಗಳು ಮೂಡಿದಷ್ಟೇ ಸಂಭ್ರಮವಾಗಿತ್ತು. ಬಹುದಿನಗಳ ಅವಳ ಅಪೇಕ್ಷೆ ಸಾರ್ಥಕವಾದ ಕ್ಷಣ. ದೂರ ನಡಿಗೆ ನಡೆದು ಗುರಿ ಮುಟ್ಟಿದ ಸಮಾಧಾನ. ಜೀವನದಿ ತೀರ ಸೇರಿದ ಸಾರ್ಥಕತೆ.

ಇಷ್ಟು ದಿನಗಳ ಒದ್ದಾಟಕ್ಕೊಂದು ಮುಕ್ತಿ ದೊರೆತಂತಿದೆ. ಕಂಡವರ ಉದಾರತೆಯಲ್ಲೇ ಈ ಜೀವ ಪೋಷಣೆ ನಡೆದುದ್ದಾಯಿತು. ಬೆಂಗಳೂರಿಗೆ ಬಂದು ರಾಯರ ಕೃಪಾಕಟಾಕ್ಷದಲ್ಲಿ ಇಂಜಿನಿಯರಿಂಗ್ ಮುಗಿಸಿದ್ದಾಯಿತು. ಮತ್ತೊಬ್ಬರ ಹಂಗಿನಡಿಯಿಂದ ಕೊನೆಗೂ ಹೊರ ಬಂದು ಸ್ವಾವಲಂಬಿಯಾಗಿ ಬದುಕುವ ಕ್ಷಣ ಬಂದಿದೆ.. ಅಪೂರ್ವಳಿಗೆ ಹೃದಯ ತುಂಬಿ ಬಂದಿತ್ತು.

ರಾಯರ, ವಿಜಯಮ್ಮನ ಕಾಲಿಗೆರಗಿ ಅಪೂರ್ವ ಕಣ್ಣೀರಿಟ್ಟಿದ್ದಳು. ಸುಪ್ತವಾಗಿದ್ದ ಭಾವನೆಗಳ ಒಡ್ಡು ಒಡೆದ ಅಣೆಕಟ್ಟಿನಂತೆ ಕಂಬನಿಯಾಗಿ ಹರಿದಿತ್ತು.

'ನಿಮ್ಮ ಆಶ್ರಯ ಇಲ್ಲಿದ್ರೆ ಇವತ್ತು, ನನ್ನ ಜೀವನದಲ್ಲಿ ಇಂಥ ದಿನ ಬರ್ತಾ ಇರಲಿಲ್ಲ. ನಿಮ್ಮ ಋಣ ಈ ಜನ್ಮದಲ್ಲಿ ತೀರಿಸಲು ಸಾಧ್ಯ ಇಲ್ಲ.. ಅನಾಥೆಯಾಗಿದ್ದ ನಾನು, ಇವತ್ತು ಈ ಹಂತ ತಲುಪ್ತೀನಿ ಅಂತ ಕನಸಲ್ಲೂ ನೆನೆಸಿರಲಿಲ್ಲ.. ಎಲ್ಲೋ ಇದ್ದ ನನ್ನನ್ನು ತಂದು ಅನ್ನ ಹಾಕಿ, ಫೀಸು ಕಟ್ಟಿ ಕಾಲೇಜು ಸೇರಿ ನನ್ನ ಬದುಕಿಗೊಂದು ಆಯಾಮ ನೀಡಿದ್ರಿ.. ಇವತ್ತು ನನ್ನ ಜೀವನ ಒಂದು ಗುರಿ ಮುಟ್ಟಿದೆ ಅಂದ್ರೆ ಅದಕ್ಕೆ ಕಾರಣ ನೀವೇ... ಚೆನ್ನಾಗಿ ಓದಬೇಕು.. ಒಳ್ಳೇ ಕಡೆ ನೌಕರಿಗೆ ಸೇರಬೇಕು.. ಎಂದೆಲ್ಲಾ ಕಾಣ್ತಿದ್ದ ಕನಸು ಇಂದು ಸಾಕಾರವಾಗಿದ್ರೆ.. ಅದು ನಿಮ್ಮಿಂದ..' ಅಪೂರ್ವ ಸಮರ್ಪಣಾಭಾವದಲ್ಲಿ ಭಾವುಕಳಾಗಿ ನುಡಿದಳು.

'ನೀನು ನಮ್ಗೆ ಮಾಡಿರುವ ಉಪಕಾರ ಕಡಿಮೆನಾ ಅಪೂರ್ವ..? ನನ್ನ ಮಗನನ್ನು ಸರಿಯಾದ ದಾರಿಗೆ ತಂದು ನಿಲ್ಲಿಸಿದ್ದೀಯಾ.. ಅವ್ನ ಕೈ ಹಿಡಿದು ಈ ಮನೆ ಸೊಸೆಯಾಗಿ ಬರ್ತಾ ಇದ್ದೀಯಾ.. ನಮ್ಗೆ ಅದಕ್ಕಿಂತ ಹೆಚ್ಚು ಏನು ಬೇಕು..?' ವಿಜಯಮ್ಮ ಅವಳ ತಲೆದಡವಿ ನುಡಿದಾಗ, ರಾಯರು ನವಿರಾಗಿ ಕೆಮ್ಮಿದರು.

ಆದರ್ಶನ ತಾಯಿ ವಿದ್ಯಾ ಕರೆ ಮಾಡಿದ್ದರು, ಅಪೂರ್ವಳ ಪರೀಕ್ಷೆ ಮುಗೀತಲ್ಲ... ಏನು ನಿರ್ಧಾರಕ್ಕೆ ಬಂದಿರಿ? ಇನ್ನು ಹೆಚ್ಚು ದಿನ ನಮ್ಗೆ ಕಾಯೋಕೆ ಆಗಲ್ಲ..

'ಕೇಳಿ ಹೇಳ್ತೀನಮ್ಮಾ..' ಎಂದು ರಾಯರು ನುಣುಚಿಕೊಂಡಿದ್ದರು. ಅವರಿಗೆ ಸತ್ಯ ತಿಳಿಸುವ ಸಾಹಸ ಮಾಡಲಾಗಿರಲಿಲ್ಲ. ಎಲ್ಲೋ ಒಂದು ವಿಧದ ಅಳುಕು ಅವರನ್ನು ಬಾಧಿಸುತ್ತಲೇ ಇತ್ತು. ಆದರ್ಶ ಅಪೂರ್ವಳಿಗೆ ಕರೆ ಮಾಡಿ ಅಭಿನಂದಿಸಿದ್ದ. 'ವಿಪ್ರೋದಲ್ಲಿ ಕೆಲಸ ಸಿಕ್ಕಿತಂತೆ ಒಳ್ಳೇ ಅಂತ ನನ್ಗೆ ಪಾರ್ಟಿ ಕೊಡಿಸಲ್ವಾ..?'

'ಮೊದಲ ತಿಂಗಳ ಸಂಬಳ ಬರಲಿ.. ಆಗ ಕೊಡಿಸ್ತೀನಿ.. ಈಗಿನ್ನೂ ಪರೀಕ್ಷೆ ಫಲಿತಾಂಶ ಬರಬೇಕು.. ಒಂದು ತಿಂಗಳು ಊರಿಗೆ ಹೋಗಿ ರೆಸ್ಟ್ ತಗೋಬೇಕು.. ನಂತರ ಕೆಲಸಕ್ಕೆ ಸೇರೋದು..'

'ನಮ್ಮ ಮದ್ವೆ ವಿಚಾರ ಏನ್ಮಾಡಿದ್ರಿ..? ಈ ಬಡಪಾಯಿ ನಿಮ್ಮ ಲಿಸ್ಟ್‌ನಲ್ಲಿದ್ದಾನಾ ಇಲ್ವಾ..?' ಯಾಚನೆಯ ಸ್ವರದಲ್ಲಿ ಕೇಳಿದಾಗ ಅಪೂರ್ವ ಉಸಿರಾಡುವುದನ್ನೇ ನಿಲ್ಲಿಸಿದಂತೆ ತಟಸ್ಥಳಾಗಿದ್ದಳು.

'ಆದರ್ಶ... ನೌಕರಿಗೆ ಸೇರಿದ ಮೇಲೆ.. ನನಗೆ ನನ್ನ ಜೀವನ.. ನನ್ನದೆಂಬಂತೆ ಅನುಭವಿಸಬೇಕು.. ಸ್ವತಂತ್ರಳಾಗಿ ನನಗಾಗಿ ನೀವು ದಯವಿಟ್ಟು ಕಾಯಬೇಡಿ..'

'ಇದೇ ನಿಮ್ಮ ಕೊನೇ ಮಾತಾ..?' ಆದರ್ಶ ಆರ್ತನಾಗಿ ಕೇಳಿದ್ದ.

'ಪ್ಲೀಸ್.. ನಿಮ್ಮ ಸ್ನೇಹ ನನಗೆ ತುಂಬಾ ಅಮೂಲ್ಯ.. ನನ್ನ ಕಷ್ಟಕ್ಕೆ ಹೆಗಲು ಕೊಟ್ಟು ನನ್ನ ದುಃಖಕ್ಕೆ ಸಮಾಧಾನ ಹೇಳಿ, ನನ್ನ ಖುಷಿಯಲ್ಲಿ ಸಂಭ್ರಮಿಸುವುದರಲ್ಲಿ ನೀವು ಜೊತೆ ಇರ್ತೀರ ಅಂತ ನನಗೆ ಗೊತ್ತು.. ಈ ಸ್ನೇಹ ಯಾವಾಗ್ಲೂ ಹೀಗೇ ಇರಲಿ ಅಂತ ಆಶಿಸ್ತೀನಿ..' ಆದರ್ಶನ ಹೃದಯ ಭಾರವಾಗಿತ್ತು. ಏನೂ ಹೇಳಲಾಗದೇ ದುಗುಡದಿಂದಲೇ ಸಂಪರ್ಕ ಕಡಿದಿದ್ದ.

'ಪರೀಕ್ಷೆ ಮುಗೀತು.. ಕೆಲಸನೂ ಸಿಕ್ತು.. ಇನ್ನು ನಿಶ್ಚಿತಾರ್ಥ ಮಾಡಿಬಿಡೋಣ.. ಆಗದೇನೋ ಸೂರ್ಯ..?' ವಿಜಯಮ್ಮ ಅಪೂರ್ವಳನ್ನು ಮನೆ ತುಂಬಿಸಿಕೊಳ್ಳಲು ತುದಿಗಾಲಲ್ಲಿ ನಿಂತರು.

'ನನ್ದೇನೂ ಅಭ್ಯಂತರ ಇಲ್ಲಮ್ಮಾ.. ನೀವು ಹೇಗೆ ಹೇಳ್ತೀರೋ ಹಾಗೆ..' ಸೂರ್ಯ ವಿನೀತನಂತೆ ನುಡಿದ ಅವನಿಗೂ, ಒಳಗೇ ಆದಷ್ಟು ಬೇಗ ಅಪೂರ್ವಳನ್ನು ಸಂಗಾತಿಯನ್ನಾಗಿ ಮಾಡಿಕೊಳ್ಳುವ ಹಾತೊರೆಯುವಿಕೆ ಇತ್ತು.

'ವಸುಮತಿಯವ್ರನ್ನು ಕರೆಸಿಬಿಡೋಣ.. ಒಳ್ಳೇ ದಿನ ನೋಡಿ ನಿಶ್ಚಿತಾರ್ಥ ಮುಗಿಸಿ, ಮದ್ವೆ ದಿನ ಗೊತ್ತು ಮಾಡೋಣ.. ನಿಶ್ಚಿತಾರ್ಥ ಆದ್ಮೇಲೆ ಅಪೂರ್ವ ಅವ್ಳ ಚಿಕ್ಕಮ್ಮನ ಜೊತೆ ಹಳ್ಳಿಗೆ ಹೋಗ್ಲಿ.. ಆಮೇಲೆ ಶಾಶ್ವತವಾಗಿ ಇಲ್ಲಿರಲು ಸೊಸೆಯಾಗಿ ಬರಲಿ..' ಅಪೂರ್ವ ನಾಚಿ ತಲೆತಗ್ಗಿಸಿದಳು. ರಾಯರು ಯಾವುದೇ ಮಾತುಕತೆಯಲ್ಲಿ ತಮ್ಮ ಹಸ್ತಕ್ಷೇಪ ತೋರಿಸದೇ ತಟಸ್ಥರಾಗಿ ಉಳಿದಿದ್ದರು. ವಿಜಯಮ್ಮನೇ ಮುತುವರ್ಜಿ ವಹಿಸಿ ನಿಶ್ಚಿತಾರ್ಥದ ದಿನ ಗೊತ್ತು ಪಡಿಸಿ ವಸುಮತಿ, ಶಂಕರನನ್ನು ಆಹ್ವಾನಿಸಿದ್ದರು. ಮನೆಯಲ್ಲಿ ನಿಶ್ಚಿತಾರ್ಥದ ಸಂಭ್ರಮ ಕಳೆಕಟ್ಟಿತು.

(ಸಶೇಷ)